# ಶಿಕ್ಷಣವೇ ಬಯಸಿದ ಬದುಕಿನ ಕೀಲಿಕೈ

**ಐಎಎಸ್ ಅಧಿಕಾರಿಯಾಗಿ ಸಮಾಜಮುಖಿ ಕಾರ್ಯ ಮಾಡಬೇಕು ಎನ್ನುವ ಕನಸನ್ನು ಹೊತ್ತಿರುವ ರಹಮತುನ್ನೀಸಾ ಬಿಬಿಎಂಪಿ ಕಾಲೇಜಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮೊದಲ ರ‍್ಯಾಂಕ್ ಪಡೆದು ದಾಖಲೆಯ ಪದವಿ ಪಡೆದಿದ್ದಾರೆ. ಸರ್ಕಾರಿ ಶಿಕ್ಷಣ ಸಂಸ್ಥೆಯ ಗುಣಮಟ್ಟದ ಬಗ್ಗೆ ವಿಶ್ವಾಸ ಹೊಂದಿರುವ ಅವರು ಶಿಕ್ಷಣವೇ ಬಯಸಿದ ಬದುಕಿನ ಕೀಲಿಕೈ ಎಂದು ನಂಬಿದ್ದಾರೆ.**

■ ರಾಘವೇಂದ್ರ

◆ ನಿಮ್ಮ ಕುಟುಂಬದ ಹಿನ್ನೆಲೆಯೇನು?

ತಂದೆ ಸೈಯದ್ ಸನಾವುಲ್ಲಾ, ತಾಯಿ ಸೈಯಿದುನ್ನಿಸಾ. ತಂದೆ ನಮ್ಮನ್ನು ಅಗಲಿ ಹದಿನಾರು ವರ್ಷ ಆಗಿದೆ. ನನಗೆ ಮೂವರು ಅಕ್ಕಂದಿರು, ಅವರ ಮದುವೆಯಾಗಿದೆ. ಈಗ ಮನೆಯಲ್ಲಿ ಅಮ್ಮ, ನಾನು, ಅಣ್ಣ ಮೂವರಿದ್ದೇವೆ. ಮನೆ ಬೆಂಗಳೂರಿನ ನಾಗವಾರದಲ್ಲಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ನಡೆದದ್ದು ಸರ್ಕಾರಿ ಉರ್ದು ಶಾಲೆಯಲ್ಲಿ. ಏಳನೇ ತರಗತಿಯಲ್ಲಿ ಶಾಲೆಗೆ ಮೊದಲಿಗಳಾಗಿದ್ದೆ. ಹತ್ತನೇ ತರಗತಿಯಲ್ಲಿಯೂ ಶೇ. 92 ಅಂಕಪಡೆದು ಶಾಲೆಗೆ ಮೊದಲಿಗಳಾದೆ. ಪಿಯುಸಿ ಮತ್ತು ಬಿಕಾಂ ಮಾಡಿದ್ದು 'ಬೆಂಗಳೂರು ಬೃಹತ್ ನಗರ ಪಾಲಿಕೆ' (ಬಿಬಿಎಂಪಿ) ಕಾಲೇಜಿನಲ್ಲಿ. ಪಿಯುನಲ್ಲಿ ಶೇ. 96 ಅಂಕಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದೆ. ಬಿಕಾಂನಲ್ಲಿ ಬೆಂಗಳೂರು ವಿವಿಯಲ್ಲಿ (4600 ಅಂಕಗಳಿಗೆ 4226) ಮೊದಲ ರ‍್ಯಾಂಕ್ ಪಡೆದಿದ್ದೇನೆ. ಮೊದಲ ರ‍್ಯಾಂಕ್ ಬರುತ್ತೆ ಎನ್ನುವ ಕಲ್ಪನೆ ಇರಲಿಲ್ಲ. ಒಳ್ಳೆಯ ಫಲಿತಾಂಶ ಪಡೆಯುತ್ತೇನೆ ಎಂದಷ್ಟೇ ನಿರೀಕ್ಷಿಸಿದ್ದೆ. ರ‍್ಯಾಂಕ್ ಬಂದಿದ್ದರಿಂದ ತುಂಬ ಸಂತೋಷವಾಗಿದೆ. ನನ್ನ ಓದು ನನಗೊಂದು ಐಡೆಂಟಿಟಿ ನೀಡಿದೆ. ಇದಕ್ಕೆ ಕಾರಣರಾದ ನನ್ನ ಶಿಕ್ಷಕರು ಮತ್ತು ಕುಟುಂಬದವರಿಗೆ ಕೃತಜ್ಞಳಾಗಿದ್ದೇನೆ.

◆ ನಿಮ್ಮ ಓದಿನ ವೇಳಾಪಟ್ಟ ಮತ್ತು ಕ್ರಮ ಹೇಗಿತ್ತು?

ಓದಿನ ಮೇಲಿನ ಆಸಕ್ತಿ ಬಾಲ್ಯದಿಂದಲೂ ಇತ್ತು. ಅದನ್ನು ಪೊರೆದು ಪ್ರೋತ್ಸಾಹಿಸಿದವರು ನನಗೆ ದೊರೆತ ಅಧ್ಯಾಪಕ ಬಳಗ. ಶಾಲೆ–ಕಾಲೇಜಿನಲ್ಲಿ ಪಾಠ ಕೇಳುವಾಗ ಗಮನವನ್ನು ಕೇಂದ್ರೀಕರಿಸಿ ಕೂರುತ್ತಿದ್ದೆ. ಹಾಗಾಗಿ ನನ್ನ ಅಭ್ಯಾಸದ ಶೇ.70ರಷ್ಟು ಭಾಗ ತರಗತಿಯಲ್ಲಿಯೇ ಮುಗಿಯುತ್ತಿತ್ತು. ಉಳಿದ 30ರಷ್ಟು ಭಾಗ ಮಾತ್ರ ಮನೆಯಲ್ಲಿ ಓದುತ್ತಿದ್ದೆ. ಓದಿನ ಗುಟ್ಟು ಗಮನ ಕೇಂದ್ರೀಕರಿಸುವುದರಲ್ಲೇ ಇದೆ. ತರಗತಿಯ ಪಾಠಗಳನ್ನು ಕೇಳುವಾಗ ಕಥೆಯನ್ನು ಕೇಳುವ ತಲ್ಲೀನತೆಯನ್ನು ತೋರಿಸಬೇಕಾಗಿರುವುದು ವಿದ್ಯಾರ್ಥಿಗಳ ಪ್ರಾಥಮಿಕ ಕರ್ತವ್ಯ. ಪಾಠವನ್ನು ಗಮನವಿಟ್ಟು ಕೇಳಿದರೆ ದೀರ್ಘಕಾಲ ಮನಸಿನಲ್ಲಿ ಉಳಿಯುತ್ತದೆ. ಅದನ್ನು ಪುನರ್‌ಮನನ ಮಾಡಲು ಒಂದಿಷ್ಟು ಓದಬೇಕು. ನಾನೂ ಅದನ್ನೇ ಅನುಸರಿಸುತ್ತಾ ಬಂದಿದ್ದೇನೆ.

◆ ನಿಮ್ಮ ಮುಂದಿನ ಕನಸು ಏನು?



ಐಎಎಸ್ ಅಧಿಕಾರಿ ಆಗಬೇಕು ಎಂದು ಕನಸು ಕಟ್ಟಿಕೊಂಡಿದ್ದೇನೆ. ಬಿಕಾಂ ಸೇರಿದ ಸಂದರ್ಭದಲ್ಲಿ ಆ ರೀತಿಯ ಯೋಚನೆ ಇರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಲೆಕ್ಕ ಹಾಕುವಂತೆ ಲಕ್ಷ ಲಕ್ಷ ಸಂಪಾದನೆಗೆ 'ಸಿಎ' ಮಾಡಿದರೆ ಚಂದ ಎಂದು ಅದರತ್ತ ಲಕ್ಷ್ಯ ನೀಡಿದ್ದೆ. ಒಂದು ವರ್ಷ ಕಳೆದ ಮೇಲೆ ಸೇವಾ ವಲಯದ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಯೋಚನೆ ಬಂತು. ಇಂತಹ ಕನಸು ನನ್ನ ಮನಸಲ್ಲಿ ಮೊಳಕೆಯೊಡೆಯಲು ರಾಷ್ಟ್ರೀಯ ಸೇವಾ ಯೋಜನೆಯ (ಎನ್‌ಎಸ್‌ಎಸ್) ಶಿಬಿರ ಕಾರಣ. ಅಲ್ಲಿ ನನಗೆ ಸೇವೆಯ ಮಹತ್ವ ತಿಳಿಯುವ ಜೊತೆಗೆ ಸರ್ಕಾರಿ ಸೇವಾಕ್ಷೇತ್ರದ ಪರಿಚಯವೂ ಆಯಿತು. ನಾನೇನಾದರೂ ಭಾರತೀಯ ನಾಗರಿಕ ಸೇವೆಗೆ ಸೇರಿದರೆ ನೇರವಾಗಿ ಜನರಿಗೆ ಸಹಾಯ ಮಾಡಬಹುದು. ಸಮಾಜಮುಖಿ ಕೆಲಸ ಮಾಡಲು ಹೆಚ್ಚಿನ ಅವಕಾಶ ಸಿಗುತ್ತದೆ ಎನ್ನುವುದನ್ನು ಅಲ್ಲಿ ತಿಳಿದೆ.

◆ ಪಠ್ಯವನ್ನು ಬಿಟ್ಟು ಬೇರೆ ಇನ್ನೇನು ಓದುವಿರಿ?

ನಿಯತಕಾಲಿಕೆಗಳನ್ನು ಮತ್ತು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುತ್ತೇನೆ. ಇಷ್ಟು ದಿನ ಕಾಲೇಜಿನ ಓದಿನಲ್ಲಿಯೇ ತೊಡಗಿದ್ದರಿಂದ ಹೆಚ್ಚಾಗಿ ಪಠ್ಯವನ್ನೇ ಓದಿದ್ದೇನೆ. ಯಾವುದೇ ಪಠ್ಯಕ್ಕೆ ಒಬ್ಬ ಲೇಖಕರ ಪುಸ್ತಕವನ್ನು ಮಾತ್ರ ನಾನು ಓದುತ್ತಿರಲಿಲ್ಲ. ಪ್ರತಿ ವಿಷಯಕ್ಕೂ ಇಬ್ಬರು ಅಥವಾ ಮೂವರು ಲೇಖಕರ ಪುಸ್ತಕಗಳನ್ನು ಪರಾಮರ್ಶೆ ಮಾಡುತ್ತಿದ್ದೆ. ಉರ್ದು ಸಾಹಿತ್ಯವನ್ನು ಒಂದಿಷ್ಟು ಓದಿದ್ದೇನೆ. ಉರ್ದುವಿನಲ್ಲಿ ಪದ್ಯಗಳನ್ನೂ ಬರೆಯುತ್ತೇನೆ. ಅವು ಇನ್ನೂ ಪ್ರಕಟವಾಗಿಲ್ಲ. ಕೆಲವೊಂದು ಲೇಖನಗಳನ್ನೂ ಬರೆದಿದ್ದೇನೆ. ಇಂಗ್ಲಿಷ್‌ನಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಪ್ರಬಂಧ ಬರೆದು ಬಹುಮಾನ ಪಡೆದಿದ್ದೇನೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಿಕ್ಕ ಅವಕಾಶವನ್ನು ಬಳಸಿಕೊಂಡಿದ್ದೇನೆ. ಕಾಲೇಜಿನ ವಾರ್ಷಿಕೋತ್ಸವ ಹಾಗೂ ಎನ್‌ಎಸ್‌ಎಸ್ ಶಿಬಿರಗಳಲ್ಲಿ ಅನೇಕ ನಾಟಕಗಳಲ್ಲಿ ಭಾಗಿಯಾಗಿರುವೆ.

◆ ಐಎಎಸ್‌ಗೆ ಹೇಗೆ ಸಿದ್ಧತೆ ಮಾಡುತ್ತಿದ್ದೀರಿ?

ಇನ್ನಷ್ಟೇ ಅದರತ್ತ ಗಮನಹರಿಸಬೇಕಿದೆ. ವಾಣಿಜ್ಯ ವಿದ್ಯಾರ್ಥಿಯಾದ ನಾನು ಅದರಲ್ಲಿಯೇ ಸಮರ್ಥವಾಗಿ ಪರೀಕ್ಷೆ ಬರೆಯಬಲ್ಲೆ ಎನ್ನುವ ವಿಶ್ವಾಸ ಮೂಡಿದೆ. ಹಾಗಾಗಿ ವಾಣಿಜ್ಯ ವಿಷಯವನ್ನೇ ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳುತ್ತೇನೆ. ಐಎಎಸ್ ಅಧಿಕಾರಿಯಾದರೆ ನನ್ನ ಆದ್ಯತೆ ಏನಾಗುತ್ತದೆ ಎಂದರೆ ಸೇವೆ ಎಂದಷ್ಟೇ ಹೇಳುತ್ತೇನೆ. ಪ್ರಾಮಾಣಿಕವಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಬೇಕು, ಅದೇ ನನ್ನ ಮೊದಲ ಪ್ರಾಶಸ್ತ್ಯ. ಸಮಾಜಕ್ಕೆ ಒಳಿತಾಗುವಂತೆ ನನ್ನನ್ನು ನನ್ನ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇನೆ.

◆ ಕಿರಿಯ ವಿದ್ಯಾರ್ಥಿಗಳಿಗೆ ನಿಮ್ಮ ಸಲಹೆ ಏನು?

ಯಾವ ವಿಷಯದ ಮೇಲೆ ಒಲವು ಇರುತ್ತದೆಯೋ ಅದನ್ನೇ ಆಯ್ಕೆ ಮಾಡಿಕೊಳ್ಳಬೇಕು. ವಿಜ್ಞಾನದಲ್ಲಿ ಆಸಕ್ತಿಯಿದ್ದು ವಾಣಿಜ್ಯ ವಿಭಾಗಕ್ಕೆ ಅಡ್ಮಿಷನ್ ಮಾಡಿಸಿದರೆ ಓದಿನ ಆಸಕ್ತಿ ಕಡಿಮೆಯಾಗಿ ಶೈಕ್ಷಣಿಕ ಜೀವನವೇ ಕುಂಠಿತವಾಗುವ ಅಪಾಯ ಇದೆ. ಓದು ಕೂಡ ನಮ್ಮ ಇಷ್ಟದಂತೆ ರೂಪಿಸಿಕೊಳ್ಳಬೇಕು. ಆಗ ಅದರಿಂದ ಆನಂದವನ್ನು ಅನುಭವಿಸಬಹುದು. ಆಸಕ್ತಿ ಇದ್ದರೆ ಎಷ್ಟೇ ಅಡ್ಡಿಗಳು ಎದುರಾದರೂ ಅದನ್ನು ಎದುರಿಸುತ್ತೇವೆ. ನಮ್ಮ ಗುರಿ ಉನ್ನತ ಶಿಕ್ಷಣ ಎಂದು ನಿರ್ಧರಿಸಿಕೊಂಡರೆ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಶಿಕ್ಷಣ ಪಡೆದರೆ ಮಾತ್ರ ನಮ್ಮನ್ನು ನಾವು ಗುರುತಿಸಿಕೊಂಡು ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯ. ಎಷ್ಟೇ ಕಷ್ಟ ಬಂದರೂ ಓದನ್ನು ಅರ್ಧಕ್ಕೆ ಬಿಡಬಾರದು. ಮಧ್ಯಮ ವರ್ಗದವರು ಮತ್ತು ಬಡವರು ಸರ್ಕಾರಿ ಶಾಲೆ–ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳಿತು ಎನ್ನುವುದು ನನ್ನ ಸಲಹೆ. ■